**ದಿ: 04-08-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲು : 1 ರಿಂದ 6 ನೇ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಮಲ್ಲಾಡಿ ಜಯರಾಮ ಶೆಟ್ಟಿ ರವರಿಂದ

ದಾವೆಯನ್ನು ಸುರೇಂದ್ರ ಹೆಗ್ಡೆ ಮತ್ತು ಇತರರು ಸೇರಿ ಸಲ್ಲಿಸಿರುತ್ತಾರೆ. ದಾವೆಯನ್ನು ನಡೆಸಲು ನನಗೆ 1 ನೇ ವಾದಿ ಮಾತ್ರ ಮುಕ್ತ್ಯಾರುಪತ್ರವನ್ನು ನೀಡಿರುತ್ತಾನೆ. 1 ನೇ ವಾದಿಯು ಕುಂದಾಪುರದ ವಾಸಿ ಮತ್ತು ವೈದ್ಯಕೀಯ ವೃತ್ತಿ ಮಾಡುತ್ತಿದ್ದಾರೆ ಎಂದರೆ ಸರಿ. ಉಳಿದ ವಾದಿಗಳು ಸಹ ನನಗೆ ಪರಿಚಯವಿದೆ. 2 ರಿಂದ 7 ನೇ ವಾದಿಗಳು ಕುಂದಾಪುರದಲ್ಲಿ ವಾಸ ಮಾಡುತ್ತಿರುವುದಿಲ್ಲ ಮತ್ತು ಬೇರೆ ಬೇರೆ ಊರುಗಳಲ್ಲಿ ವಾಸ ಮಾಡುತ್ತಿದ್ದಾರೆ. 2 ರಿಂದ 7 ನೇ ವಾದಿಗಳು ದಾವೆ ನಡೆಸಲು ನನಗೆ ಯಾವುದೇ ಅಧಿಕಾರ ಪತ್ರ ನೀಡಿರುವುದಿಲ್ಲ.

**2.** ನನಗೆ ಪ್ರತಿವಾದಿಗಳು ವೈಯುಕ್ತಿಕವಾಗಿ ಗೊತ್ತು. ದಾವಾ ಆಸ್ತಿಗಳು ಬೈಂದೂರು ಗ್ರಾಮದಲ್ಲಿರುತ್ತವೆ. ನಾನು ಕುಂದಾಪುರ ಗ್ರಾಮದಲ್ಲಿ ವಾಸ ಮಾಡುತ್ತಿದ್ದೇನೆ. ದಾವಾ ಆಸ್ತಿಗಳು ನಮ್ಮ ಮನೆಯಿಂದ ಸುಮಾರು 35 ಕಿ.ಮೀ ದೂರದಲ್ಲಿರುತ್ತವೆ. ದಾವಾ ಆಸ್ತಿಗಳ ಬಗ್ಗೆ ನನಗೆ ಕಳೆದ 5-6 ವರ್ಷಗಳಿಂದ ಮಾಹಿತಿ ಇರುತ್ತದೆ. ದಾವಾ ಆಸ್ತಿಗಳ ಬಗ್ಗೆ 1 ನೇ ವಾದಿ ನನಗೆ ಮಾಹಿತಿ ನೀಡಿರುತ್ತಾರೆ. ವಾದಿಗಳ ಆಸ್ತಿಗಳ ದಾಖಲೆಗಳು ಬೇರೆಯವರ ಹೆಸರಿನಲ್ಲಿರುವುದರಿಂದ ಅವುಗಳನ್ನು ತಮ್ಮ ಹೆಸರಿಗೆ ಮಾಡಿಕೊಡಬೇಕೆಂದು ವಾದಿಗಳು ಪರಿಹಾರ ಕೇಳುತ್ತಿದ್ದಾರೆ. ವಾದಿಗಳು ದಾವಾ ಆಸ್ತಿಗಳ ಸ್ವಾಧೀನತೆ ಸಹ ಕೇಳುತ್ತಿದ್ದಾರೆ. ದಾವಾ ಆಸ್ತಿಗಳು ಈಗ ಹರ್ಸನ್ ಪಟೇಲರ ಸ್ವಾಧೀನದಲ್ಲಿರುತ್ತಾರೆ. ಹರ್ಸನ್ ಪಟೇಲರು ದಾವಾ ಆಸ್ತಿಗಳನ್ನು ಮೂಲಗೇಣಿ ಮೂಲಕ ಪಡೆದಿರುತ್ತಾರೆ. ಸದರಿ ಮೂಲಗೇಣಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ.

**3.** ದಾವಾ ಸರ್ವೆ ನಂಬ್ರ 86/1 ರಲ್ಲಿನ 07-46 ಎಕರೆ; 86/3 ರಲ್ಲಿನ 12-48 ಎಕರೆ ಮತ್ತು 86/2 ರಲ್ಲಿನ 00-50 ಸೆಂಟ್ಸ್ ಜಮೀನುಗಳು ಯಡ್ತಾರೆ ಅಳಿಯಸಂತಾನ ಕುಟುಂಬದ ಮೂಲಹಕ್ಕಿನ ಆಸ್ತಿಗಳು ಎಂದರೆ ಸರಿ. ಸದರಿ ಆಸ್ತಿಗಳ ಮೂಲ ಗೇಣಿ ಹಕ್ಕನ್ನು ಅಳಿಯ ಸಂತಾನ ಕುಟುಂಬದ ಪರವಾಗಿ ಕೃಷ್ಣಪ್ಪ ಶೆಟ್ಟಿ ಎನ್ನುವವರು ದಿನಾಂಕ 11-10-1950 ರಂದು ನಾರ್ಬಟ್ ಮ್ಯಾನೇಜಸ್ ಎನ್ನುವವರಿಗೆ ನೊಂದಾಯಿತ ಮೂಲಗೇಣಿ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ 20-00 ಎಕರೆಯ ಪೈಕಿ ಅರ್ಧ ಹಕ್ಕನ್ನು ಮಾತ್ರ ಮಾರಿದ್ದಾರೆ ಎಂದು ಹೇಳುತ್ತಾರೆ. ಸದರಿ ಕ್ರಯಪತ್ರವನ್ನು ನಾನು

ನಿ.ಪಿ-2 ರ ಪ್ರಕಾರ ಹಾಜರು ಮಾಡಿದ್ದೇನೆ. ಸದರಿ ಕ್ರಯ ಪತ್ರದ ಒಕ್ಕಣೆಗೆ ನನ್ನ ಆಕ್ಷೇಪಣೆ ಇದೆಯೋ ಇಲ್ಲವೋ ಎಂದು ನನಗೆ ಹೇಳಲು ಆಗುವುದಿಲ್ಲ. ಕ್ರಯ ಪತ್ರದ ಪ್ರಕಾರ ನಾರ್ಬರ್ಟ್ ಮ್ಯಾನೇಜಸ್ ಅವರು ಸಂಪೂರ್ಣ ಮೂಲಗೇಣಿದಾರರಾಗಿದ್ದರು ಎಂದರೆ ಸರಿ.

**4.** ದಿನಾಂಕ 13-08-1975 ರಂದು ಸದರಿ ನಾರ್ಬರ್ಟ್ ಮ್ಯಾನೇಜಸ್ ರವರು ಸರ್ವೆ ನಂಬ್ರ 86/1 ರ ಪೂರ್ವ ದಿಕ್ಕಿನ 03-73 ಎಕರೆ ಮತ್ತು ಸರ್ವೆ ನಂಬ್ರ 86/3 ರ ಪೂರ್ವ ದಿಕ್ಕಿನ 06-24 ಎಕರೆಯನ್ನು ಪಾಂಡುರಂಗ ನಾಯಕ್ ಬಿನ್ ಮರ್ತಪ್ಪ ನಾಯಕ್ ರಿಗೆ ಮೂಲಗೇಣಿ ಹಕ್ಕನ್ನು ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ದಿನಾಂಕ 13-08-1975 ರಂದು ಅವರ ನಡುವೆ ಮೂಲಗೇಣಿ ಕ್ರಯಪತ್ರವಾಗಿದೆ ಎಂದರೆ ಸರಿ. ಸದರಿ ಕ್ರಯಪತ್ರವನ್ನು ನಾನು ಪಡೆದು ಪರಿಶೀಲನೆ ಮಾಡಿರುವುದಿಲ್ಲ. ಸದರಿ ಕ್ರಯ ಪತ್ರದ ಪ್ರಕಾರ ಪಾಂಡುರಂಗ ನಾಯಕ ಮೂಲಗೇಣಿ ಹಕ್ಕನ್ನು ಪಡೆದಿದ್ದರು ಎಂದರೆ ಸರಿ.

**5.** ದಿನಾಂಕ 28-02-1975 ರಂದು ಗೋವಿಂದ ಶೇರುಗಾರರು ಸದರಿ ನಾರ್ಬರ್ಟ್ ಮ್ಯಾನೇಜಸ್ ರವರಿಂದ ಸರ್ವೆ ನಂಬ್ರ 86/1 ರ ಪೂರ್ವ ದಿಕ್ಕಿನ 03-73 ಎಕರೆ ಮತ್ತು ಸರ್ವೆ ನಂಬ್ರ 86/3 ರ ಪೂರ್ವ ದಿಕ್ಕಿನ 06-24 ಎಕರೆಯ ಒಳಮೂಲಗೇಣಿ ಹಕ್ಕನ್ನು ಪಡೆದಿದ್ದರು ಎಂದರೆ ಸರಿ.

**6.** ದಿನಾಂಕ 01-09-1977 ರಂದು ದುಲ್ಸಿನ್ ಲೋಬೊ ಎನ್ನುವರರು ಪಾಂಡುರಂಗ ನಾಯಕರಿಂದ ಸರ್ವೆ ನಂಬ್ರ 86/1 ರಲ್ಲಿನ 01-86.50 ಎಕರೆ ಮತ್ತು ಸರ್ವೆ ನಂಬ್ರ 86/3 ರಲ್ಲಿನ 03-12 ಎಕರೆಯ ಮೂಲಗೇಣಿ ಹಕ್ಕನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿ.

ಸದರಿ ದಿನದಂದು 1 ನೇ ಪ್ರತಿವಾದಿಯ ಗಂಡ ಮತ್ತು 2 ರಿಂದ 6 ನೇ ಪ್ರತಿವಾದಿಯ ತಂದೆಯಾದ ಹರ್ಸನ್ ಪಟೇಲರು ಪಾಂಡುರಂಗ ನಾಯಕರಿಂದ ಸರ್ವೆ ನಂಬ್ರ 86/1 ರಲ್ಲಿನ 01-86.50 ಎಕರೆ ಮತ್ತು ಸರ್ವೆ ನಂಬ್ರ 86/3 ರಲ್ಲಿನ 03-12 ಎಕರೆಯ ಮೂಲಗೇಣಿ ಹಕ್ಕನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿ. ಸದರಿ ಕ್ರಯ ಪತ್ರದ ಪ್ರಕಾರ ಹರ್ಸನ್ ಪಟೇಲರು ಸದರಿ ಜಮೀನುಗಳನ್ನು ತಮ್ಮ ಜೀವಿತ ಕಾಲದಲ್ಲಿ ಅನುಭವಿಸಿಕೊಂಡು ಬಂದಿದ್ದರು ಎಂದರೆ ಸರಿ. ಹರ್ಸನ್ ಪಟೇಲರು ಮರಣ ಹೊಂದಿದ ನಂತರ 1 ರಿಂದ 6 ನೇ ಪ್ರತಿವಾದಿಗಳು ಸದರಿ ಜಮೀನುಗಳ ಸ್ವಾಧೀನತೆಯಲ್ಲಿದ್ದಾರೆ ಎಂದರೆ ಸರಿ. (ಮೇಲೆ ಹೇಳಿದ ಮೂರು ಸಲಹೆಗಳನ್ನು ಪ್ರತಿವಾದಿಗಳ ಪರ ವಕೀಲರು ಕೇಳಿದ ನಂತರ ನ್ಯಾಯಾಲಯ ಸದರಿ ಸಲಹೆಗಳ ಅರ್ಥವನ್ನು ಬಿಡಿಸಿ ಹೇಳಿದರೂ ಸಹ ಸಾಕ್ಷಿ ಸದರಿ ಸಲಹೆಗಳನ್ನು ಒಪ್ಪಿಕೊಂಡಿರುತ್ತಾರೆ.)

**7.** ಸದರಿ ಜಮೀನುಗಳು ದಿನಾಂಕ 01-03-1974 ರಂದು ಕೃಷಿಯೇತರ ಬೆಟ್ಟು (ಒಣ) ಜಮೀನುಗಳು ಆಗಿದ್ದವು ಎಂದರೆ ಸರಿ. ನಿ.ಪಿ-2 ನ್ನು ವಾದಿಗಳು ಅಥವಾ ಅವರ ಕುಟುಂಬದವರು ಇಲ್ಲಿಯವರೆಗೆ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ ಎಂದರೆ ಸರಿ. ಅದೇ ರೀತಿ ದಿನಾಂಕ 01-09-1977 ರಂದು ಪಾಂಡುರಂಗ ನಾಯಕನು ಹರ್ಷನ್ ಪಾಟೇಲರಿಗೆ ಬರೆದುಕೊಟ್ಟಿರುವ ಮೂಲಗೇಣಿ ಹಕ್ಕಿನ ಕ್ರಯಪತ್ರವನ್ನು ವಾದಿಗಳು ಅಥವಾ ಅವರ ಕುಟುಂಬದವರು ಇಲ್ಲಿಯವರೆಗೆ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ.

**8.** ದಾವಾ ಆಸ್ತಿಗಳ ಮೇಲೆ ವಾದಿಯರಿಗೆ ಮೂಲಗೇಣಿ ಹಕ್ಕು ಇರುತ್ತದೆ. ದಾವಾ ಆಸ್ತಿಗಳು ಮೊದಲು ಕೃಷ್ಣಪ್ಪ ಶೆಟ್ಟಿವರಿಗೆ ಸೇರಿದ್ದು, ಅವರ ನಂತರ ಅವರ ಮಗಳಾದ ಪಾರ್ವತಿ ಶೆಡ್ತಿಗೆ ವಾರಸು ಪ್ರಕಾರ ಬಂದಿರುತ್ತದೆ. ಪಾರ್ವತಿ ಶೆಡ್ತಿಯು 1 ನೇ ವಾದಿಯ ತಾಯಿ. ಕೃಷ್ಣಪ್ಪ ಶೆಟ್ಟಿಯಿಂದ ಆಸ್ತಿಗಳು ಪಾರ್ವತಿ ಶೆಡ್ತಿಗೆ ಬಂದ ಬಗ್ಗೆ ದಾಖಲೆಗಳನ್ನು ನಾನು ನೋಡಿರುವುದಿಲ್ಲ.

**9.** ನಾನು ಮುಖ್ಯ ವಿಚಾರಣೆಯ ಬದಲಾಗಿ ಸಲ್ಲಿಸಿರುವ ಪ್ರಮಾಣ ಪತ್ರವನ್ನು ತಯಾರಿಸಲು 1 ನೇ ವಾದಿ ಮಾಹಿತಿ ನೀಡಿರುತ್ತಾನೆ. ಪ್ರಮಾಣ ಪತ್ರ ದಲ್ಲಿ ಹೇಳಿರುವ ಅಸಲು ದಾವಾ ಸಂಖ್ಯೆ 7/1965 ರ ಡಿಕ್ರಿಯ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

**10.** ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಯಡ್ತಾರೆ ಅಳಿಯಸಂತಾನ ಕುಟುಂಬದ ಸದಸ್ಯರು ದಿನಾಂಕ 16-02-1959 ರಂದು ಒಂದು ವಿಭಾಗ ಪತ್ರ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗಪತ್ರದ ಪ್ರಕಾರ 1 ನೇ ವಾದಿಯ ತಾಯಿಯಾದ ಶ್ರೀಮತಿ ಪಾರ್ವತಿ ಶೆಡ್ತಿಯ ಕವರಿಗೆ ಸದರಿ ವಿಭಾಗ ಪತ್ರದ ಬಿ ಶೆಡ್ಯೂಲ್ ಆಸ್ತಿಗಳನ್ನು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗ ಪತ್ರದ ಪ್ರಕಾರ ದಾವಾ ಆಸ್ತಿಗಳ ಮೂಲಿ ಹಕ್ಕನ್ನು ಸದರಿ ಪಾರ್ವತಿ ಶೆಡ್ತಿಯ ಕವರಿಗೆ ನೀಡಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಭಾಗ ಪತ್ರದ ಪ್ರಕಾರ ದಾವಾ ಆಸ್ತಿಗಳ ಮೂಲಿ ಹಕ್ಕನ್ನು ಪಾರ್ವತಿ ಶೆಡ್ತಿಯ ಸಹೋದರಿಯಾದ ಮೂಕಾಂಬಿಕಾ ಶೆಡ್ತಿಯ ಕವರಿನ ಕುಟುಂಬಕ್ಕೆ ನೀಡಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಅಸಲು ದಾವಾ ಸಂಖ್ಯೆ 7/1965 ರ ಡಿಕ್ರಿಯ ಪ್ರಕಾರ ದಾವಾ ಆಸ್ತಿಗಳ ಮೇಲೆ ಯಾವುದೇ ಹಕ್ಕನ್ನು ವಾದಿಗಳು ಮತ್ತು ಅವರ ಕುಟುಂಬದವರಿಗೆ ನೀಡಿಲ್ಲ ಎಂದರೆ ನನಗೆ ಗೊತ್ತಿಲ್ಲ.

**11.** ಶ್ರೀಮತಿ ಚಂದಮ್ಮ ಶೆಡ್ತಿ ಎನ್ನುವವರು 1 ನೇ ವಾದಿಯ ಅಜ್ಜಿ. ಸದರಿ ಚಂದಮ್ಮ ಶೆಡ್ತಿಗೆ ಪಾರ್ವತಿ ಶೆಡ್ತಿ, ಮೂಕಾಂಬು ಶೆಡ್ತಿ, ಯಡ್ತಾರೆ ಮಂಜಯ್ಯ ಶೆಟ್ಟಿ ಹಾಗೂ ಇತರೆ ಮಕ್ಕಳಿದ್ದರು ಎಂದರೆ ಸರಿ.

ಚಂದಮ್ಮ ಶೆಡ್ತಿಯ ಹೆಸರು 1967 ನೇ ಸಾಲಿನಿಂದ ಇತ್ತೀಚಿನವರೆಗೆ ದಾವಾ ಆಸ್ತಿಗಳ ಪಹಣಿ ಪತ್ರಿಕೆಯಲ್ಲಿ ಮೂಲಿದಾರರು ಎಂದು ನಮೂದಾಗಿತ್ತು ಎಂದರೆ ಸರಿ. ಅದೇ ರೀತಿ ಮೂಲಗೇಣಿದಾರರ ಹೆಸರುಗಳು ಪಹಣಿ ಪತ್ರಿಕೆಗಳಲ್ಲಿ ದಾಖಲಾಗಿದ್ದವು ಎಂದರೆ ಸರಿ.

**12.** ಚಂದಮ್ಮ ಶೆಡ್ತಿ ಮರಣ ಹೊಂದಿದ ನಂತರ ತಾವು ವಾರಸುದಾರರು ಎಂದು ದಾವಾ ಆಸ್ತಿಗಳ ಪಹಣಿ ಪತ್ರಿಕೆಯಲ್ಲಿ ತಮ್ಮ ಹೆಸರನ್ನು ವಾದಿಗಳು ದಾಖಲು ಮಾಡಿಕೊಂಡಿದ್ದಾರೆ ಎಂದರೆ ಸರಿ. ವಾದಿಗಳ ಹೆಸರು ಪಹಣಿ ಪತ್ರಿಕೆಗಳಲ್ಲಿ ದಾಖಲಾಗುವ ಸಂದರ್ಭದಲ್ಲಿ ಚಂದಮ್ಮ ಶೆಡ್ತಿಯ ಇತರೇ ವಾರಸುದಾರರು ಬದುಕಿದ್ದರು ಎಂದರೆ ಸರಿ. ಮೂಲಿದಾರರಿಗೆ ಗೊತ್ತಿಲ್ಲದ ಹಾಗೇ ವಾದಿಗಳು ತಮ್ಮ ಹೆಸರುಗಳನ್ನು ಪಹಣಿ ಪತ್ರಿಕೆಗಳಲ್ಲಿ ದಾಖಲು ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿಯರು ಅಸಲು ದಾವಾ ಸಂಖ್ಯೆ 7/1965 ರ ಡಿಕ್ರಿಯ ಮೇರೆಗೆ ದಾವೆ ದಾಖಲು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅಸಲು ದಾವಾ ಸಂಖ್ಯೆ 7/1965 ರ ಡಿಕ್ರಿಯನ್ನು ಹಾಜರು ಮಾಡಿದರೆ ತಮಗೆ ವಿರುದ್ಧವಾಗುತ್ತದೆ ಎಂದು ಅದನ್ನು ವಾದಿಗಳು ಹಾಜರು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ವಾದಿಯರಿಗೆ ದಾವಾ ಆಸ್ತಿಗಳ ಮೇಲೆ ಯಾವುದೇ ಹಕ್ಕು ಮತ್ತು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ಆದರೂ ಸಹ ವಾದಿಯರು ಪ್ರತಿವಾದಿಗಳಿಗೆ ತೊಂದರೆ ನೀಡಲು ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

**13.** ನಾನು ರಿಯಲ್ ಎಸ್ಟೇಟ್ ಮಾಡುತ್ತಿದ್ದೇನೆ ಎಂದರೆ ಸರಿ. ನಾನು 1 ನೇ ವಾದಿಯ ಆಸ್ತಿಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಮಾಡಿಕೊಟ್ಟಿದ್ದೇನೆ ಎಂದರೆ ಸರಿ. ದಾವಾ ಆಸ್ತಿಗಳನ್ನು 1 ರಿಂದ 6 ನೇ ಪ್ರತಿವಾದಿಗಳಿಂದ 7 ನೇ ಪ್ರತಿವಾದಿ ಖರೀದಿ ಮಾಡಿದ್ದಾನೆ ಎಂದರೆ ಸರಿ. ನಾನು ಮತ್ತು ಬೇರೆಯವರು ದಾವಾ ಆಸ್ತಿಗಳನ್ನು ಖರೀದಿ ಮಾಡಲು ಪ್ರಯತ್ನಿಸಿದ್ದೇವೆ ಎಂದರೆ ಸರಿಯಲ್ಲ.

**14.** 7 ನೇ ಪ್ರತಿವಾದಿ ಖರೀದಿಸಿದ ಆಸ್ತಿಗಳ ಸ್ವಾಧೀನದಲ್ಲಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳನ್ನು ಹೆದರಿಸಲು ಮತ್ತು ಅಕ್ರಮ ಲಾಭ ಹೊಂದಲು ವಾದಿಯ ಹೆಸರಿನಲ್ಲಿ ನಾನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವೆಯನ್ನು ಸಲ್ಲಿಸಲು ವಾದಿಯರಿಗೆ ಅಧಿಕಾರ ಮತ್ತು ಆಸಕ್ತಿ ಇಲ್ಲ ಎಂದರೆ ಸರಿಯಲ್ಲ. ನನಗೆ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರು ಮಾಡಿರುವ ದಾಖಲೆಗಳು ನ್ಯಾಯಯುತ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ.

<u>ಪಾಟೀ ಸವಾಲು</u> : <u>1 ರಿಂದ 6 ನೇ ಪ್ರತಿವಾದಿಗಳ ಪರ ವಕೀಲರು ಕೈಗೊಂಡಿರುವ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು 7 ನೇ ಪ್ರತಿವಾದಿಯ ಪರ ವಕೀಲರು ಅನುಮತಿ ಕೋರಿರುತ್ತಾರೆ. ಅನುಮತಿಸಲಾಯಿತು.</u>

<u>ಮರು ವಿಚಾರಣೆ</u> : ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

ಹಿರಿಯ ಸಿವಿಲ್ ನ್ಯಾಯಾಧೀಶರು
ಕುಂದಾಪುರ